ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಭೂಸ್ವಾಧೀನವಾಗಿರುವ ಬಗ್ಗೆ

ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು) :-

293 (465) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಹಲವಾರು ಸರ್ವೆ ನಂಬರ್ ಜಮೀನುಗಳು ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಭೂಸ್ವಾಧೀನವಾಗಿದ್ದು, ಈ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಭೂಸ್ವಾಧೀನಪಡಿಸಿಕೊಂಡ ಭೂ ಮಾಲೀಕರು/ರೈತರಿಗೆ ಎಷ್ಟು ಜಮೀನನ್ನು ವಿಸ್ತರಣೆ (exಣeಟಿಣ) ಮಾಡಲಾಗಿದೆ ; ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಒದಗಿಸುವುದು ;

(ಆ) ವಿಸ್ತರಣೆಯಾಗಿದ್ದಲ್ಲಿ, ಯಾವ ಯಾವ ಸರ್ವೆ ನಂಬರ್ಗಳಿಗೆ ವಿಸ್ತರಣೆ ಮಾಡಲಾಗಿದೆ ; (ದಾಖಲೆ ನೀಡುವುದು)

(ಇ) ಸಂಪೂರ್ಣ ವಿಸ್ತರಣೆಯಾಗದೇ ಇದ್ದಲ್ಲಿ ಕಾರಣವೇನು ; (ವಿವರ ನೀಡುವುದು)

(ಈ) ಯಾವ ಯಾವ ಜಮೀನಿನ ಭೂ ಮಾಲೀಕರು/ರೈತರಿಗೆ ಸುಪರ್ದಿ ನೀಡಲಾಗಿದೆ ; (ದಾಖಲೆಗಳನ್ನು ನೀಡುವುದು)

(ಉ) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಭೂ ಸ್ವಾಧೀನ ರದ್ದುಪಡಿಸಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ಅಂದರೆ ಬಿಡಿಎ, ಬಿಬಿಎಂಪಿ ಮತ್ತು ಇತರರಿಗೆ ಮಾಹಿತಿ/ನಿರ್ದೇಶನ/ಸೂಚನೆಯನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ, ದಾಖಲೆಗಳನ್ನು ಒದಗಿಸುವುದು ; ನೀಡದಿದ್ದಲ್ಲಿ, ಕಾರಣವೇನು;

(ಊ) ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಭೂಸ್ವಾಧೀನಕ್ಕೆ ಸಂಬಂಧಪಟ್ಟ ಕಡತಗಳ ಸಂಪೂರ್ಣ ವಿವರಗಳನ್ನು ನೀಡುವುದು ?